

ಇಷ್ಟೂ ಬಾಟ್ಲಿ ಮೂರೇ ದಿನಗಳಲ್ಲಿ ಖಾಲಿಯಾಗುತ್ತೆ, ನೋಡಿ! ಜೇನುಕೃಷಿ ಇಲ್ಲಿನ ಇನ್ನೊಂದು ಗಣನೀಯ ಆದಾಯಮೂಲ.

## ಜೇನಿಗೆ ಮನೆ ಮಾರುಕಟ್ಟೆ

ತೋಟದ ನಡುನಡುವೆ ತುಡುವೆ ಮತ್ತು ಮುಜಂಟಿ ಜೇನಿನ ಪೆಟ್ಟಿಗೆಗಳಿವೆ. ಮುಜಂಟಿ ಪೆಟ್ಟಿಗೆಗಳಿಗೆ ರೈನ್‌ಕೋಟ್ ತೊಡಿಸಿ ಮರಗಳಿಗೆ ತೂಗಿಸಿದ್ದಾರೆ. ವರ್ಷಕ್ಕೆ ಮೂರೂವರೆ ಕ್ವಿಂಟಾಲ್ ತುಡುವೆ ಜೇನು ಸಿಗುತ್ತದೆ. ರಬ್ಬರ್ ಮೂಲದ ಈ ಜೇನಿನ ಬೆಲೆ ಕಿಲೋಗೆ ₹350. 50–60 ಮುಜಂಟಿ ಪೆಟ್ಟಿಗೆ ಇದೆ. ಇದರಿಂದ 10–12 ಕಿಲೋ ಜೇನು ಸಿಗುತ್ತದೆ. ಬೆಲೆ ಕಿಲೋಗೆ ₹2 ಸಾವಿರ.

ಗ್ರಾಹಕರು ಇಲ್ಲಿಗೇ ಬಂದು ಕೊಳ್ಳುತ್ತಾರೆ. ಈಚೆಗೆ ತೆಗೆದಿಟ್ಟ 50 ಬಾಟ್ಲಿ ಜೇನು ತೋರಿಸಿ ಜಾರ್ಜ್ ಹೇಳುತ್ತಾರೆ, 'ಇದು ಮೂರೇ ದಿನದಲ್ಲಿ ಖಾಲಿ ಆಗುತ್ತದೆ. ವರ್ಷಕ್ಕೆ ಒಂದೂವರೆ ಟನ್ ಮಾರುತ್ತೇನೆ. ಸುತ್ತುಮುತ್ತಲ ರೈತರಿಗೆ ಸಲಹೆ, ಸಹಕಾರ ಕೊಟ್ಟು, ಅವರಿಂದ ಜೇನು ಕೊಂಡುಕೊಳ್ಳುತ್ತೇನೆ. ಮನೆಯಿಂದಲೇ ಮಾರಾಟ ದೊಡ್ಡ ಅನುಕೂಲ.'

## ಹೊಟ್ಟು ಬಾವಿ ಈಗ ಸಮೃದ್ಧ

ಕೊಳವೆಬಾವಿ ಕೊರೆಸುವುದಕ್ಕೂ ಮುನ್ನ ನಾಲ್ಕು ಬಾವಿ ತೋಡಿದ್ದರು. ಎಲ್ಲವೂ ಮಳೆಗಾಲಾನಂತರ ಖಾಲಿ! ಆದರೆ ಇವನ್ನು ಮುಚ್ಚಿರಲಿಲ್ಲ. ನೀರಿಂಗಿಸುವುದರ ವಿಚಾರ ಅರ್ಥವಾದ ಮೇಲೆ ಇವರು ಒಂದು ಉಪಾಯ ಹೊಳೆಯಿತು. ಮಳೆಗಾಲದಲ್ಲಿ ಗುಡ್ಡದಿಂದ ಇಳಿಯುವ ನೀರನ್ನು ಮೂರನೆಯ ಬಾವಿಗೆ ತುಂಬುತ್ತಾರೆ. ಹತ್ತಿರದಲ್ಲೇ ಇರುವ ನಾಲ್ಕನೆಯದು ಮೂರು ವರ್ಷದಿಂದ ಬತ್ತುವುದೇ ಇಲ್ಲ.

ಮನೆಯ ಪಕ್ಕದಲ್ಲೇ 10 ಸಾವಿರ ಲೀಟರಿನ ಕುಡಿನೀರಿನ ಟಾಂಕಿ ಇದೆ. ಎಲ್ಲರಂತೆ ಇವರು ಇದಕ್ಕೆ ಚಾವಣಿ ನೀರಿನ ಸಂಪರ್ಕ ಕೊಟ್ಟಿಲ್ಲ. ನೆರೆ ಜಮೀನಿನ ಸುರಂಗದ ನೀರು ಜನವರಿವರೆಗೆ ಅವರಿಗೆ ಬೇಡ. ಅದನ್ನೇ ಪೈಪಿನಲ್ಲಿ ತಂದು ಈ ಟಾಂಕಿಯಲ್ಲಿ ತುಂಬಿಕೊಳ್ಳುತ್ತಾರೆ. ಅನಂತರ ನಾಲ್ಕನೇ ಬಾವಿಯ ನೀರು ತರುತ್ತಾರೆ. ಮಾರಾಟಕ್ಕೆ ಕರಿಮೆಣಸಿನ ಗಿಡ ಮಾಡುತ್ತಿದ್ದಾರೆ. ಇಲಾಖೆ ಇವರಿಂದ ಕೊಂಡುಕೊಳ್ಳುತ್ತದೆ. ಗ್ರೀನ್‌ಹೌಸ್ ಜಮೀನಿನ ಅತಿ ಕೆಳಗಿದೆ. ಅಲ್ಲೇ ಮೇಲಿನ ಮಳೆಕೊಳದ ನೀರು. ಅದಕ್ಕೂ ಗುರುತ್ವಾಕರ್ಷಣ ಶಕ್ತಿಯೇ ಸಾಕು. ತನ್ನ ಜಮೀನು, ನೈಸರ್ಗಿಕ ಸಂಪನ್ಮೂಲ, ಕಚ್ಚಾವಸ್ತು, ಹವಾಮಾನಕ್ಕೆ ಹೊಂದುವ ಏನೇನು ಬೆಳೆ – ಉಪಕಸುಬು ಸಾಧ್ಯ ಎಂಬುದನ್ನೆಲ್ಲಾ ಜಾರ್ಜ್ ಚೆನ್ನಾಗಿ ಅರಿತುಕೊಂಡಿದ್ದಾರೆ.

ಅವರು ಅದ್ಭುತ ಆಶಾವಾದಿ. 'ಈ ಕಾಲದಲ್ಲಿ ಕೂಲಿ ಕೊಟ್ಟು ಕೆಲಸ ಮಾಡಿಸಿ ಹೆಚ್ಚು ಉಳಿತಾಯ ಸಾಧ್ಯವಿಲ್ಲ' ಎಂದು ಒತ್ತಿ ಹೇಳುತ್ತಾರೆ. ಅಪ್ಪ–ಮಗ ಇಬ್ಬರೂ ಹನ್ನೆರಡು ಗಂಟೆ ದುಡಿಯುತ್ತಾರೆ. ಕಾರ್ಮಿಕರನ್ನು ಕರೆಯುವುದು ಅಪರೂಪ.

ವರ್ಷಕ್ಕೆ ಮೂರು ಕ್ವಿಂಟಾಲ್ ಅಡಿಕೆ, ನಾಲ್ಕು ಕ್ವಿಂಟಾಲ್ ಕರಿಮೆಣಸು – ಇನ್ನೆರಡು ಮುಖ್ಯ ಆದಾಯಮೂಲಗಳು. 'ಪ್ರತಿ ತಿಂಗಳು ಸರಾಸರಿ ಒಂದು ಲಕ್ಷ ರೂ. ಆದಾಯ ಬರುತ್ತದೆ', ಹೆಮ್ಮೆಯಿಂದ ಹೇಳುತ್ತಾರೆ ಜಾರ್ಜ್. ಮಗ ಮ್ಯಾಥ್ಯೂ ಮುಂದುವರಿಸುವುದು ಹೀಗೆ: 'ಅದು ಆದಾಯ, ಉಳಿತಾಯ ಅಲ್ಲ. ಬೆಲೆ ಏರಿಕೆ, ಕಾರ್ಮಿಕರ ಕೂಲಿ ಹೆಚ್ಚಳಗಳಿಂದ ಕೃಷಿ ಸವಾಲುದಾಯಕವಾಗಿಬಿಟ್ಟಿದೆ.'

## ಇಪ್ಪತ್ತರ ಕೃಷಿಕರಿವರು!

ಜಾರ್ಜ್‌ರೊಳಗಿರುವ ಕೃಷಿಕನಿಗೆ ಇಪ್ಪತ್ತೇ ವರ್ಷ ಪ್ರಾಯ. ಎರಡು ದಶಕ ಕಾಲ ಕಟ್ಟಡ ನಿರ್ಮಿಸುವ ಕುಶಲಕರ್ಮಿ ಮೇಸ್ತ್ರಿಯಾಗಿದ್ದರು. ಹೊಸಹೊಸ ವಿಷಯಗಳ ಬಗ್ಗೆ ಆಸಕ್ತಿ, ಕಲಿಯುವ ಹುಮ್ಮಸ್ಸು ಮತ್ತು ಉತ್ತಮ ಗ್ರಹಣಶಕ್ತಿ – ಅವರನ್ನು ಈ ನೆಲೆಗೆ ತಂದಿದೆ.

ಇಂದು ದೂರದೂರದ ಊರುಗಳಿಂದ ಆಸಕ್ತರು ಇವರ ಕೃಷಿ ತೋಟ ನೋಡಲು ಬರುತ್ತಾರೆ. 'ಒಮ್ಮೆ ಜಾರ್ಜ್ ಅವರ ಕೃಷಿ ನೋಡಿಬನ್ನಿ' ಎಂದು ಕಾಸರಗೋಡು ಕೇವೀಕೆಯವರು ಜನರನ್ನು ಇತ್ತ ಕಳಿಸುತ್ತಲೇ ಇರುತ್ತಾರೆ.

ಜಾರ್ಜ್ ಗಾರೆ ಕತ್ತಿ ಬದಿಗಿಟ್ಟು, ಹಾರೆ ಎತ್ತಿಕೊಂಡದ್ದು ಅವರ ಐವತ್ತನೇ ವಯಸ್ಸಿನಲ್ಲಿ. ಅಂದಿನಿಂದ ಪೂರ್ಣಾವಧಿ ಕೃಷಿಕ. ನಾಲ್ಕು ಮಕ್ಕಳು. ಮೂವರು ಹೆಣ್ಣು, ಒಬ್ಬಾತ ಗಂಡು. ಮಗಳಂದಿರಿಗೆ ನರ್ಸಿಂಗ್ ಓದಿಸಿ ಮದುವೆ ಮಾಡಿದ್ದಾರೆ. ಮಗ ಮ್ಯಾಥ್ಯೂ ಅವರಿಗೂ ಮದುವೆ ಆಗಿ ಮಕ್ಕಳಿದ್ದಾರೆ. ಇವರು ಓದಿದ್ದು ಹೋಟೆಲ್ ಮ್ಯಾನೇಜ್‌ಮೆಂಟ್. ಕೆಲವು ಕಾಲ ಕೊಲ್ಲಿದೇಶದಲ್ಲಿದ್ದರು. ಈಚೆಗೆ ಮರಳಿ ಅಪ್ಪನ ಜತೆ ಪೂರ್ಣಾವಧಿ ಕೃಷಿಕ.

ಜಾರ್ಜ್ ಏಳನೇ ತರಗತಿ ಪೂರ್ತಿಗೊಳಿಸಿಲ್ಲ. ಅವರಿಗೀಗ ಶಾಲಾ–ಕಾಲೇಜುಗಳಿಂದ ಸಂಪನ್ಮೂಲ ವ್ಯಕ್ತಿಯಾಗಲು ಆಹ್ವಾನ ಬರುತ್ತದೆ. 'ಮಣ್ಣನ್ನು ಪ್ರೀತಿಸಲು ಕಲಿಯಿರಿ. ಭವಿಷ್ಯಕ್ಕೆ ಅಗತ್ಯವಾದ ಒಂದಷ್ಟು ಗಿಡ ಸ್ವತಃ ನೆಟ್ಟು ಅನುಭವ ಮಾಡಿಕೊಳ್ಳಿ. ಭೂಮಿಯ, ಪ್ರಕೃತಿಯ ಸಂಪರ್ಕ ಇಟ್ಟುಕೊಳ್ಳದಿದ್ದರೆ ಭವಿಷ್ಯದಲ್ಲಿ ಸೋಲುತ್ತೀರಾ', ಇದು ಜಾರ್ಜ್ ಎಳೆಯರಿಗೆ ಹೇಳುವ ಕಿವಿಮಾತು.

'ಹೆಚ್ಚು ಓದಿಲ್ಲ ಎಂಬ ಕೀಳರಿಮೆಯಿಲ್ಲ. ಒಮ್ಮೆ ನೀರು ಪೂರ್ತಿಯಾಗಿ ನನ್ನ ಕೈ ಬಿಟ್ಟಿತ್ತು. ಮನೋಜ್ ನಮಗೆ ಮಳೆ ಹಿಡಿಯಲು ಕಲಿಸಿದರು. ಅದನ್ನೇ ಮುಂದುವರಿಸಿ ಸುಖವಾಗಿದ್ದೇವೆ', ಎನ್ನುತ್ತಾರೆ.

ತನ್ನ ಮಳೆಯಾಧಾರಿತ ವಿಜಯಗಾಥೆಯನ್ನು ಜಾರ್ಜ್ ಹಲವರಿಗೆ ಹೇಳಿದ್ದಾರಂತೆ. ಆದರೆ ಅನುಸರಿಸುವವರಿಲ್ಲ. 'ನನ್ನ ಸೋತು ಗೆದ್ದ ಕತೆ ಕೇಳದ ಮನುಷ್ಯರಿಲ್ಲ. ಆದರೆ ಅವರು ಅನುಸರಿಸಬೇಕಲ್ಲ. ಬೋರ್‌ವೆಲ್ ತೋಡಿ ಪಂಪು ಅಳವಡಿಸಲು ಒಂದೆರಡು ಲಕ್ಷ ರೂ. ಕೈಬಿಡುತ್ತದೆ. ಎಷ್ಟು ವರ್ಷ ಗ್ಯಾರಂಟಿ ಭಗವಂತನಿಗೇ ಗೊತ್ತು. ಇದಕ್ಕಿಂತ ಕಡಿಮೆ ವೆಚ್ಚದಲ್ಲಿ ಮಳೆ ಹಿಡಿಯಬಹುದು. ಹಾಗೆ ಹೇಳಿದಾಗ ಸಬ್ಸಿಡಿ ಎಷ್ಟು ಸಿಗುತ್ತೆ ಎಂದು ಕೇಳುತ್ತಾರೆ. ನಾನು ಸುಮ್ಮನಾಗುತ್ತೇನೆ', ಎಂದು ನಿಷ್ಕಳಂಕ ನಗು ನಗುತ್ತಾ ಜಾರ್ಜ್ ನಿಟ್ಟುಸಿರು ಬಿಡುತ್ತಾರೆ.

ಕೇರಳದ 'ಫೇರ್ ಟ್ರೇಡ್ ಅಲಯೆನ್ಸ್' ಸಂಸ್ಥೆ ಜಾರ್ಜ್‌ರಿಗೆ ಉತ್ತಮ ಕೃಷಿಕ ಪ್ರಶಸ್ತಿ ಕೊಡಮಾಡಿದೆ. ಕೃಷಿ ಅಭಿವೃದ್ಧಿ ಬ್ಯಾಂಕಿನ ವಸ್ತುಪ್ರದರ್ಶನದಲ್ಲಿ 25 ಸಾವಿರ ರೂಪಾಯಿ ಬಹುಮಾನ ಸಿಕ್ಕಿತ್ತು. ಇವರ ಕಪಾಟು ತುಂಬಾ ಪ್ರಶಸ್ತಿ ಫಲಕ ತುಂಬಿದ್ದು ಇನ್ನು ಅಲ್ಲಿ ಜಾಗವಿಲ್ಲ!

**ಜಾರ್ಜ್ ಕುಡುಂತಾನಂಕುಳಿಯಿಲ್ (ಮಲೆಯಾಳಮ್ ಮಾತ್ರ) ಅವರ ಸಂಪರ್ಕ: 94462 61623.**

**ಚಿತ್ರಗಳು ಲೇಖಕರವು**

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in